# ವಂದಿಸುವದಾದಿಯಲಿ ಗಣನಾಥನ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The lyrics in all the above references are fully matching. Singer has followed these wordings.

ರಾಗ: ನಾಟ ತಾಳ: ಆದಿ

ವಂದಿಸುವದಾದಿಯಲಿ ಗಣನಾಥನ
ಸಂದೇಹ ಸಲ್ಲ ಶ್ರೀ ಹರಿಯಾಜ್ಞೆಯಿದಕುಂಟು || ಪ ||

ಹಿಂದೆ ರಾವಣ ತಾನು ವಂದಿಸದೆ ಗಜಮುಖನ
ನಿಂದು ತಪವನು ಗೈದು ವರ ಪಡೆಯಲು
ಒಂದು ನಿಮಿಷದಿ ಬಂದು ವಿಘ್ನವನು ಆಚರಿಸಿ
ತಂದ ವರಗಳನೆಲ್ಲ ಧರೆಗೆ ಇಳಿಸಿದನು || 1 ||

ಅಂದಿನಾ ಬಗೆಯರಿತು ಬಂದು ಹರಿ ಧರ್ಮಜಗೆ
ಮುಂದೆ ಗಣಪನ ಪೂಜಿಸೆಂದು ಪೇಳೆ
ಒಂದೇ ಮನದಲಿ ಬಂದು ಪೂಜಿಸಲು ಗಣನಾಥ
ಹೊಂದಿಸಿದ ನಿರ್ವಿಘ್ನದಿಂದ ರಾಜ್ಯವನು || 2 ||

ಇಂದು ಜಗವೆಲ್ಲ ಉಮೆನಂದನನ ಪೂಜಿಸಲು
ಚೆಂದದಿಂದಲಿ ಸಕಲ ಸಿದ್ಧಿಗಳನಿತ್ತು
ತಂದೆ ಸಿರಿ ಪುರಂದರ ವಿಠಲನ ಸೇವೆಯೊಳು
ಬಂದ ವಿಘ್ನವ ಕಳೆದಾನಂದವನು ಕೊಡುವ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಆದಿಯಲಿ –** ಎಲ್ಲ ಕೆಲಸಗಳ ಮೊದಲಲ್ಲಿ. ಕೆಲಸಗಳಲ್ಲಿ ತೊಂದರೆಗಳು ಒದಗುವುದು ಸಹಜ; ತೊಂದರೆಗಳು ಬಾರದಿರಲು, ಬರುವ ತೊಂದರೆಗಳು ಅಲ್ಲಲ್ಲೇ ಕರಗಿ ಹೋಗಲು ದೇವರ ಒಲುಮೆಯ ಅಗತ್ಯವಿದೆ.

**ಹಿಂದೆ ರಾವಣ… –** ವೈವಸ್ವತ ಮನ್ವಂತರದಲ್ಲಿ ವಿಶ್ರವಸನ ಮಗನಾಗಿ ಹುಟ್ಟಿದ ರಾವಣನು ಗೋಕರ್ಣದಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಿ ಆತ್ಮಲಿಂಗವನ್ನು ಪಡೆದುಕೊಂಡ ಸಂದರ್ಭದಲ್ಲಿ, ಗಣಪತಿಯನ್ನು ಪೂಜಿಸದೆ ತಪಸ್ಸಿಗೆ ತೊಡಗಿದಾಗಿ, ತಾನು ಪಡೆದುಕೊಂಡ ಆತ್ಮಲಿಂಗವನ್ನು ತನ್ನ ಊರಾದ ಲಂಕೆಗೆ ಕೊಂಡೊಯ್ಯಲಾಗದೆ ಅದು ಗೋಕರ್ಣದಲ್ಲೇ ನೆಲೆಯಾಗಿ ನಿಂತಿತು. ಅವನ ತಲೆಯ ಮೇಲೆ ಹೊತ್ತಿದ್ದ ಲಿಂಗವನ್ನು ಭೂಮಿಗಿಳಿಸಿ ನೆಲೆಗೊಳಿಸಿದವನು ಹುಡುಗನಂತೆ ಮೈದಾಳಿ ಬಂದ ಗಣಪತಿಯೇ.

**ಅಂದಿನಾ ಬಗೆಯರಿತು… –** ಯುಧಿಷ್ಠಿರನು ಗಣಪತಿಯನ್ನು ಪೂಜಿಸಿದುದರಿಂದ ಎಲ್ಲ ವಿಘ್ನಗಳೂ ತೊಲಗಿ ಪಾಂಡವರಿಗೆ ರಾಜ್ಯ ಮತ್ತೆ ದೊರೆಯಿತು. ಈ ವಿವರ ಮಹಾಭಾರತದಲ್ಲಿ ಬಂದಿಲ್ಲ; ಪುರಾಣದ ಕತೆ (ಭವಿಷ್ಯೋತ್ತರ ಪುರಾಣ).

**ಉಮೆನಂದನ –** ಉಮೆಯೆಂದರೆ ಪಾರ್ವತಿ, ಅವಳ ಮಗ. ಗಣಪತಿ.

**Classification:** Keerthane
**Ankita:** Siri Purandara Vittala
**Location:** NA
**Category:** Ganesha Stuti
**Sub-Category:** Ganesha, Krishna, gaja, puje, anumana, rajya, shiva, tapa, bhumi, pandava, mana, loka, Parvati,
**Pravachana:** NA
**Explanation:** NA